# ಮಾನಸ ಗಂಗೋತ್ರಿ

ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

*ಸಂಪುಟ-44* | ಸಂಚಿಕೆ-16 | ಮೈಸೂರು | 20 – 03 –2015 | *ಪುಟಗಳು-04*


| | | | | | |
|---|---|---|---|---|---|
| ಹಳೆಯ ಯೋಜನೆಗಳ ಹೊಸ ಸೌಲಭ್ಯಗಳ ಬಜೆಟ್ *ಪುಟ: 02* | ಅವಳಿಗಿಲ್ಲದ ಸಂಭ್ರಮ ಅವನಿಗಿದೆ... | ಹೆಂಡ್ ಕುಡುಕನ ಯ(ಮ)ಂಗ್ ಶಿಷ್ಯ ಗಳಿಗೆಸಿದ್ದ *ಪುಟ: 03* | ಚಿತ್ರ ವಿಮರ್ಶೆ ರೋಚಕತೆಯ ಮಾಸ್ಟರ್ ಮೈಂಡ್ | ಪುಸ್ತಕ ವಿಮರ್ಶೆ ಅಕ್ಕ *ಪುಟ: 04* | ಕ್ರೀಡಾಸುದ್ದಿಗಳು ಅಲ್ಲಿ ವರ್ಲ್ಡ್ ಕಪ್ ಇಲ್ಲಿ ಗಂಗೋತ್ರಿ ಕಪ್ |



ಭಗತ್ ಸಿಂಗ್
23 ಮಾರ್ಚ್ ಬಲಿದಾನ ದಿನ

## ಸಂಸ್ಕೃತಿಯ ವಿನಿಮಯ



'ಮೈ ಕಂಟ್ರಿ ಮೈ ಪೀಪಲ್ ಉದ್ದೇಶ ವಿದೇಶಗಳಲ್ಲಿನ ಸಾಹಿತ್ಯ, ಕಲೆ, ಶಿಕ್ಷಣ, ಆರೋಗ್ಯ, ಜೀವನ ವಿಧಾನ, ಆಹಾರ ಪದ್ಧತಿ ಹಾಗೂ ಸಂಸ್ಕೃತಿಯ ವಿನಿಮಯ' ಎಂದು ನಗರದ ಮಹಾಜನ ಪದವಿ ಕಾಲೇಜಿನಲ್ಲಿ ಸಿಪಿಡಿಪಿಎಸ್ ಸಂಯುಕ್ತ ಆಶ್ರಯದಲ್ಲಿ ನಡೆದ ಮೈ ಕಂಟ್ರಿ ಮೈ ಪೀಪಲ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದವರು ಇಎಮ್ಆರ್‌ಸಿ ಮತ್ತು ಸಿಪಿಡಿಪಿಎಸ್ ವಿಭಾಗದ ಮುಖ್ಯಸ್ಥರಾದ ಡಾ. ನಿರಂಜನ್ ವಾನಳ್ಳಿ. ಮಹಾಜನ ಕಾಲೇಜಿನ ಪ್ರಾಂಶುಪಾಲರಾದ ಕೆ. ವಿ ಪ್ರಭಾಕರ್, ವಿಶ್ವವಿದ್ಯಾನಿಲಯದ ವಿದೇಶಿ ವಿದ್ಯಾರ್ಥಿಗಳು ಹಾಗೂ ದೇಶಿಯ ವಿದ್ಯಾರ್ಥಿಗಳು ಭಾಗವಹಿಸಿದರು.

## ಕಾರ್ ಟ್ಯೂನ್



# ಸಂಸ್ಕೃತಿಯೇ ಪತ್ರಿಕೋದ್ಯಮದ ಮೌಲ್ಯ: ಅಮಿನ್‌ಗಡ್.

**ಮಾ**ನಸಗಂಗೋತ್ರಿ 'ಸಂಸ್ಕೃತಿಯ ಪತ್ರಿಕೋದ್ಯಮದ ಮೌಲ್ಯ ಬೆಳಿಸಿಕೊಂಡು ಶ್ರದ್ದೆಯಿಂದ, ಕ್ರಿಯೇಟಿವ್ ಬದ್ಧತೆಯೊಂದಿಗೆ ಕೆಲಸ ಮಾಡಿ' ಎಂದು ಪ್ರಜಾವಾಣಿಯ ಹಿರಿಯ ವರದಿಗಾರ ಗಣೇಶ್ ಅಮಿನ್‌ಗಡ ಸಲಹೆ ನೀಡಿದರು.

ಮಾನಸಗಂಗೋತ್ರಿಯ ಮಾನವಿಕ ವಿಭಾಗದ ಪತ್ರಿಕೋದ್ಯಮದ ವಿಭಾಗದಲ್ಲಿ, ಪತ್ರಿಕೊದ್ಯಮ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾದ ವಿಶೇಷ ಉಪನ್ಯಾಸದಲ್ಲಿ ಭಾಗವಹಿಸಿ ಮಾತನಾಡಿದರು.

ಯಾವುದೇ ವೃತ್ತಿಯಲ್ಲಿ ಮೂರು ರೀತಿಯ ಕೆಲಸಗಾರರನ್ನು ಕಾಣಬಹುದು. ಮೊದಲನೆಯ ವರ್ಗದ



ಪತ್ರಿಕೋದ್ಯಮ ಕುರಿತು ಉಪನ್ಯಾಸ ನಿರತರಾದ ಗಣೇಶ್ ಅಮಿನ್‌ಗಡ

ಜನರು ಕಂದಾಯ, ತಹಸೀಲ್ದಾರ್, ಗುಮಾಸ್ತ ಕೆಲಸಗಾರರು. ಎರಡನೆಯ ವರ್ಗದವರು ಏನೋ ಒಂದಿಷ್ಟು ಕೆಲಸ ಮಾಡುವ ಧೋರಣೆ. ಕೊನೆಯ ಮೂರನೆಯ ವರ್ಗದ ಜನ ಸಂಬಳ ಒಂದು ನೆಪ, ಅದರೊಂದಿಗೆ ಕ್ರಿಯೇಟಿವ್‌ನೊಂದಿಗೆ ಕೆಲಸ ಮಾಡುವವರೆ ಪತ್ರಿಕೋದ್ಯಮಿಗಳು. ಪ್ರತಿಯೊಬ್ಬರು ಮೂರನೆ ವರ್ಗಕ್ಕೆ ಸೇರಬೇಕು ಎಂದು ತಿಳಿಸಿದರು.

ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಭವಿಷ್ಯದ ಪತ್ರಿಕೋದ್ಯಮದ ಕುರಿತು ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು. ಈ ಕಾರ್ಯಕ್ರಮವವನ್ನು ವಿಭಾಗದ ಮುಖ್ಯಸ್ಥರಾದ ಡಾ. ಸಿ.ಕೆ ಪುಟಸ್ವಾಮಿ, ಡಾ. ಬಿ. ಪಿ ಮಹೇಶ್ಚದ್ರಗುರು ಹಾಗೂ ಡಾ. ಮಮತಾ, ಸಂಶೋಧನ ವಿದ್ಯಾರ್ಥಿಗಳು ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳು ಭಾಗವಹಿಸಿದರು.

# ಬಡವರ ಕೌಶಲ್ಯ ಗುರುತಿಸಿ

ಮೈಸೂರು ಮಾನಸಗಂಗೋತ್ರಿ ಬಡವರಲ್ಲಿರುವ ಕೌಶಲ್ಯ ಗುರುತಿಸಿ, ಅವರನ್ನು ಸಬಲೀಕರಣಗಳಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಉತ್ತಮವಾದ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕ ಸುಬ್ರಹಣ್ಯಂ ಕೋರಿಕೊಂಡರು.

ಮೈಸೂರು ವಿಶ್ವವಿದ್ಯಾನಿಲಯ ತತ್ವಶಾಸ್ತ್ರ ಅಧ್ಯಯನ ವಿಭಾಗದ ಹಾಗೂ ಸ್ವಾಮಿ ವಿವೇಕಾನಂದ ಪೀಠ ಜಂಟಿಯಾಗಿ ಆಯೋಜಿಸಿದ್ದ ಉಪನ್ಯಾಸ ಮಾಲೆಯಲ್ಲಿ ಸ್ವಾಮಿ ವಿವೇಕನಂದರ ಕುರಿತು ಅವರು



ಸ್ವಾಮಿ ವಿವೇಕಾನಂದರಿಗೆ ಪೂಜೆ ಸಲ್ಲಿಸುವದರೊಂದಿಗೆ ಉಪನ್ಯಾಸಕ್ಕೆ ಚಾಲನೆ ನೀಡಿದ ಡಾ. ಆರ್ ಬಾಲಸುಬ್ರಹ್ಮಣಂ.

ಮಾತನಾಡಿದರು.

ಈಗಷ್ಟೇ ಅಲ್ಲ, ಹಿಂದಿನಿಂದಲೂ ಉಳ್ಳವರ ನಡುವೆ ಬಡವರಿಗೆ ಅವಕಾಶಗಳ ಕೊರತೆ ಇದೆ. ಬಡವರ ಉದ್ಧಾರ ಮಾಡುತ್ತೇವೆ ಎಂದು ಅಧಿಕಾರ ಹಿಡಿದ ಸರ್ಕಾರಗಳು ತಮ್ಮ ಬಜೆಟ್‌ನಲ್ಲಿ ಯಾವುದೇ ಸೌಲಭ್ಯಗಳನ್ನು ನೀಡುತ್ತಿಲ್ಲ. ಈಗಿರುವ ಸರ್ಕಾರಗಳು ಬಡವರ ಅಭಿವೃದ್ಧಿ ಪರ ಅಂಶಗಳನ್ನು ಮಂಡಿಸದೇ ಕೇವಲ ಬಂಡವಾಳ ಶಾಹಿಗಳಿಗೆ ಅನುಕೂಲಕರವಾದ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ಹೇಳಿದರು.

ಸ್ವಾಮಿ ವಿವೇಕಾನಂದರ ವಿಚಾರಧಾರೆಗಳು ಜೀವನ ಮೌಲ್ಯ ತಿಳಿಸುವಂತಹ ತತ್ವಗಳು ಎಂದು ಸಲಹೆ ನೀಡಿದರು. ತತ್ವಶಾಸ್ತ್ರದ ವಿಭಾಗದ ಮುಖ್ಯಸ್ಥರಾದ ಡಾ. ಹೆಚ್. ಎಲ್ ಚಂದ್ರಶೇಖರ್, ಪ್ರಾಧ್ಯಾಪಕರಾದ ಡಾ, ಎಸ್. ವೆಂಕಟೇಶ್ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

–ಮಲ್ಲಿಕಾರ್ಜುನ

# ನೇಮಕಾತಿಯಲ್ಲಿ : ವಿಶೇಷಚೇತನರಿಗೆ ಆದ್ಯತೆ ನೀಡಿ

**ಮಾ**ನಸಗಂಗೋತ್ರಿಯಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ವಿಶೇಷ ಶಿಕ್ಷಣದ ವಿಭಾಗದ ವತಿಯಿಂದ ಏರ್ಪಡಿಸಿದ್ದ; ವಿಶೇಷ ಅಗತ್ಯವುಳ್ಳ ವ್ಯಕ್ತಿಗಳಿಗೆ ಜೀವನಾಧಾರ ಕಾರ್ಯಕ್ರಮಗಳು' ಕುರಿತು ವಿಚಾರ ಸಂಕಿರಣದಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರದ ನಿರ್ದೇಶಕ ಡಾ. ಎಸ್.



ವಿಚಾರ ಸಂಕಿರ್ಣಕ್ಕೆ ಚಾಲನೆ

ತುಕಾರಾಂ ಭಾಗವಹಿಸಿ, 'ಸರ್ಕಾರ ಮತ್ತು ಸರ್ಕಾರೇತರ ನೇಮಕಾತಿಯಲ್ಲಿ ವಿಶೇಷ ಚೇತನರಿಗೆ ಆದ್ಯತೆ ಕೊಡಬೇಕು ಎಂದು ಆಗ್ರಹಿಸಿದ್ದರು.

ಸಿಕಂದರಬಾದ್‌ನ ಮಾನಸಿಕ ವಿಶೇಷಚೇತನರ ರಾಷ್ಟ್ರೀಯ ಸಂಸ್ಥೆ ಪ್ರಾಧ್ಯಾಪಕರಾದ ಡಾ. ಥೆರೆಸಿಯಾ ಕುಟ್ಟಿ ಇತರೆ ಗಣ್ಯರು ಹಾಜರಿದ್ದರು.

# ಹಾಸ್ಟೆಲ್‌ಗೆ ಅನಾಮಿಕನ ಪ್ರವೇಶ

**ಮಾ**ನಸ ಗಂಗೋತ್ರಿಯಲ್ಲಿರುವ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯಕ್ಕೆ ಅಪರಿಚಿತ ವ್ಯಕ್ತಿಯೊಬ್ಬ ಅಕ್ರಮವಾಗಿ ಪ್ರವೇಶ ಮಾಡಿ ಸಿಕ್ಕಿ ಬಿದ್ದಿದ್ದು, ವಿದ್ಯಾರ್ಥಿನಿಯರು ಆತನನ್ನು ಹಿಗ್ಗಾಮುಗ್ಗ ಥಳಿಸಿದ ನಂತರ ಸೂಕ್ತ ರಕ್ಷಣೆ ಒದಗಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಸೆನೆಟ್ ಭವನದ ಹತ್ತಿರ ಇರುವ ನೂತನ ಬ್ಲಾಕ್–೩ರ ಮಹಿಳಾ ವಿದ್ಯಾರ್ಥಿನಿಲಯಕ್ಕೆ ರಾತ್ರಿ ಸಮಯ ಅಪರಿಚಿತ ವ್ಯಕ್ತಿಯೊಬ್ಬ ಅಕ್ರಮವಾಗಿ ಪ್ರವೇಶ ಮಾಡಿದ್ದು, ಆತನನ್ನು ಕಂಡ ವಿದ್ಯಾರ್ಥಿನಿಯರು ಕಿರುಚಿಕೊಂಡಾಗ ಸ್ಥಳದಿಂದ ಪರಾರಿಯಾಗಿದ್ದ.

ಮತ್ತೆ ಮಾರನೆ ದಿನ ಮಧ್ಯರಾತ್ರಿ ೨:೩೦ರ ಹೊತ್ತಿಗೆ ನಿಲಯದ ಶೌಚಾಲಯದಲ್ಲಿ ಕಾಣಿಸಿಕೊಂಡಿದ್ದು, ಆತನನ್ನು ಸೆರೆ ಹಿಡಿದ ವಿದ್ಯಾರ್ಥಿನಿಯರು ಹಿಗ್ಗಾಮುಗ್ಗ ಥಳಿಸಿ, ವೇಲ್‌ನಿಂದ ಕಟ್ಟಿಹಾಕಿ ನಂತರ ಜಯಲಕ್ಷ್ಮೀಪುರಂ ಪೋಲಿಸರ ವಶಕ್ಕೆ ನೀಡಿದರು.

–ನಂದಿನಿ ಕೆ ಎಲ್

# ಪರೀಕ್ಷೆಗೆ ಗುರಿ ಸ್ಪಷ್ಟತೆ ಅಗತ್ಯ

'ಯುಪಿಎಸ್‌ಸಿ ಪರೀಕ್ಷೆಗೆ ಮಾತ್ರ ನಿರ್ದಿಷ್ಟ ಗುರಿ, ವಿಷಯಗಳ ಸ್ಪಷ್ಟತೆ ಇರಲೇಬೇಕು' ಎಂದು ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಪಿ. ಮಣಿವಣ್ಣನ್ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿಯ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದಲ್ಲಿ ನಡೆಯುತ್ತಿರುವ ಯುಪಿಎಸ್‌ಸಿ, ಕೆಪಿಎಸ್‌ಸಿ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ಶಿಬಿರದಲ್ಲಿ ಸಂವಾದ ನಡೆಸಿ. ನೀವು ಅತ್ಯುತ್ತಮ ಶ್ರೇಣಿಯಲ್ಲಿ ಪದವಿಯಲ್ಲಿ ತೇರ್ಗಡೆಯಾಗಬೇಕು ಎಂದೇನಿಲ್ಲ. ಸಾಮಾನ್ಯ ಶ್ರೇಣಿಯಲ್ಲಿ ಪಾಸಾಗಿ ಉತ್ತಮ ಅಂಕಗಳಿಸ ಬಹುದು ಎಂದು ತಮ್ಮ ಮನದಾಳದಿ ನುಡಿದರು.

ಮಾನಸ ಗಂಗೋತ್ರಿ

**ಹಿತನುಡಿ**

**ಈ ಪ್ರಪಂಚ ಒಂದು ಡೊಡ್ಡ ಗರಡಿಯ ಮನೆ. ನಾವಿಲಿ ಬಲಿಷ್ಠರಾಗುದಕ್ಕೆ ಬಂದಿರುವೆವು.**
**–ಸ್ವಾಮಿ ವಿವೇಕಾನಂದರು.**


## ಸಂಪಾದಕರ ಮಂಡಳಿ

ಪ್ರಧಾನ ಸಂಪಾದಕರು : ಡಾ.ಸಿ.ಕೆ ಪುಟ್ಟಸ್ವಾಮಿ

ಸಂಪಾದಕರು : ಡಾ.ಸಿ.ಕೆ ಪುಟ್ಟಸ್ವಾಮಿ

ವಿದ್ಯಾರ್ಥಿ ಸಂಪಾದಕರು : ಮಲ್ಲಿಕಾರ್ಜುನ, ನಂದಿನಿ ಕೆ. ಎಲ್. ನಂಜುಂಡಸ್ವಾಮಿ. ಎಮ್, ನಿಂಗರಾಜು. ಸಿ

ಪುಟ ವಿನ್ಯಾಸ : ಮಲ್ಲಿಕಾರ್ಜುನ

ತಾಂತ್ರಿಕ ನೆರವು : ಶ್ರೀನಾಥ್ ಅರಸ್


# ಸಂಪಾದಕೀಯ

## ಹಳೆಯ ಯೋಜನೆಗಳ ಹೊಸ ಸೌಲಭ್ಯಗಳ ಬಜೆಟ್

**ಮು**ಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಹತ್ತನೇಯ ಬಜೆಟ್‌ನಲ್ಲಿ ಈ ಮೊದಲು ಜಾರಿಗೆ ತಂದ ಯೋಜನೆಗಳಿಗೆ ಅಧಿಕ ಸೌಲಭ್ಯ ಒದಗಿಸುವ ತಳಪಾಯದ ಮೇಲೆ ಮಂಡಿಸಿದ್ದಾರೆ.

೨೦೧೫ರ ಸಾಲಿನ ಬಜೆಟ್ ಗಾತ್ರ ೧,೪೨,೫೩೪ ಕೋಟಿ ರೂಪಾಯಿಂದ ಕೂಡಿದು, ಕಳೆದ ಬಾರಿಗೆ ಹೋಲಿಸಿದ್ದರೆ ಶೇ ೩.೨೮% ರಷ್ಟು ಹೆಚ್ಚಳ ಕಂಡಿದೆ. ಯೋಜನಾ ಗಾತ್ರ ೭೨,೫೯೭ ಕೋಟಿ ಇದು ಶೇ ೩. ೨೮%ರಷ್ಟು ಹೆಚ್ಚು ಅಧಿಕವಾಗಿದೆ. ಪ್ರತಿ ಬಾರಿಯಂತೆ ಸದ್ದು ಮಾಡುವ ಯೋಜನೆಗಳು ಕೈ ಬಿಟ್ಟು ತೆರಿಗೆದಾರನ ಜೇಬಿಗೆ ಕೈ ಹಾಕಿದಾರೆ ಸಿಎಂ. ಅನ್ನ ಭಾಗ್ಯದ ವ್ಯಾಪ್ತಿಗೆ ಎಪಿಎಲ್ ಕಾರ್ಡ್‌ದಾರರಿಗೂ ಯೋಜನೆ ವಿಸ್ತರಿಸಿ, ಇದಕ್ಕೆ ಉಪ್ಪು ಎಣ್ಣೆಯನ್ನು ಬೆರೆಸಿ ಬಿಪಿಎಲ್ ಪಡಿತದಾರರ ಒಬ್ಬ ಸದಸ್ಯರಿಗೆ ೫ ಕೆಜಿ ವರೆಗೂ ಅಕ್ಕಿಯನ್ನು ಉಚಿತ ಪಡೆಯುವಂತೆ ಮಾಡಿ, ಮುಂದೆ ನಡೆಯುವ ಗ್ರಾಮ ಪಂಚಾಯಿತಿ ಚುನಾವಣೆಯ ಮೇಲೆ ಕಣ್ಣಿಟ್ಟಿದು ನೇರವಾಗಿ ಗೋಚರಿಸುವಂತಿದೆ. ಉತ್ತರ ಭಾರತದ ರಾಜ್ಯಗಳಲ್ಲಿ ಅಳವಡಿಸಿಕೊಳ್ಳುವಂತ ಹೋಲೈಕೆ ಸೌಲಭ್ಯಗಳು ಶೋಷಿತ ಜಾತಿಗಳ ವರ್ಗ, ಹಿಂದುಳಿದ ಪಂಗಡಗಳನ್ನು ಗುರುತಿಸಿ, ಆ ವರ್ಗಗಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸುವಂತೆ ಹೊಸ ಚಿಂತನೆಯಾಗಿದ್ದು, ಹಿಂದುಳಿದ ವರ್ಗಗಳ ಏಳಿಗೆ ಶ್ರಮಿಸಿದ ದಿವಂಗತ ಮಾಜಿ ಮುಖ್ಯ ಮಂತ್ರಿ ದೇವರಾಜ್ ಅರಸರ ಜನ್ಮ ಶತಮಾನೋತ್ಸದ ಕೊಡುಗೆಯ ಸ್ಮರಣೆ.

ರಾಜ್ಯದ ಪ್ರಸಕ್ತ ವರ್ಷದ ಆರ್ಥಿಕತೆಯನ್ನು ಗಮನಿಸಿದರೆ, ಆತಂಕ ಪಡುವ ಸ್ಥಿತಿಯಲ್ಲಿ ಇಲ್ಲದೆ ಇದರು ಅಂತಹ ದಿನಗಳು ಎದುರಾಗುವಂತಿದೆ ವಸ್ತುಸ್ಥಿತಿ. ಸುಮಾರು ೧,೩೯,೪೭೬ ಕೋಟಿ ರೂಪಾಯಿಗಳ ಆದಾಯದಲ್ಲಿ ಏದನೆಯ ಒಂದು ಪಾಲು ಸಾಲವಾಗಿ ಬಂದದ್ದು ಸರಕಾರ ಹೆತ್ತೆಚ್ಚವಾಗಿ ಭಾಗ್ಯದ ಯೋಜನೆಗಳ ಬೆನ್ನು ಬಿದ್ದಿದು. ನೀರಾವರಿ, ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ಮೂಲ ಸೌಲಭ್ಯಗಳ ಯೋಜನೆಗಳಿಗೆ ಸರಕಾರ ಒದಗಿಸುವ ಆದ್ಯತೆ ಪ್ರಮಾಣ ಕಡಿಮೆಯಾಗಿದ್ದು ಈ ಕ್ಷೇತ್ರಗಳು ನಿರೀಕ್ಷಿತ ಮಟ್ಟದ ಅಭಿವೃದ್ಧಿಯಿಂದ ವಂಚಿತವಾಗಿವೆ. ರಾಜ್ಯದ ಪ್ರತಿಯೊಬ್ಬನ ತಲೆ ಮೇಲೆ ೨೫,೮೦೨ ರೂಪಾಯಿಗಳ ಸಾಲದ ಹೊರೆಯಾಗಿದ್ದು. ಒಟ್ಟು ೧,೫೭,೬೮೧ ಕೋಟಿ ರೂಪಾಯಿಗಳ ವಿಪರೀತ ಹೊರೆ ಎನ್ನುವಂತಿದೆ.ರಾಜ್ಯದ ಬೊಕಸಕ್ಕೆ ತೆರಿಗೆ ಮೂಲ ಆದಾಯವಾಗಿದು, ಯಾವುದೆ ಹೊಸ ತೆರಿಗೆಯನ್ನು ಹಾಕದೆ, ಹೂಡಿಕೆದಾರರ ವ್ಯವಹಾರ ಹೆಚ್ಚುವುದರಿಂದ ತೆರಿಗೆಯ ಮೊತ್ತವೂ ತನ್ನಷ್ಟೆ ತಾನ್ನಾಗಿ ಹೆಚ್ಚುತ್ತದೆ ಎಂಬ ಉದ್ದೇಶ. ಡೀಸಲ್, ಪೆಟ್ರೋಲ್, ಸಿಗರೇಟ್, ಗುಟ್ಕಾ, ತಂಬಾಕು ಪದಾರ್ಥಗಳ ಬೆಲೆಗಳನ್ನು ಹೆಚ್ಚಿಸಿದ್ದಾರೆ. ಜನತೆಗೆ ವಿಪರಿತ ಹೊರೆ ಎನ್ನುವಂತಿಲ್ಲ. ಮೈಸೂರು ವಿಶ್ವವಿದ್ಯಾಲಯದ ಶತಮಾತ್ಸೋವದ ಆಚರಣೆಗೆ ೫೦ ಕೋಟಿ ರೂಪಾಯಿಗಳು ಮಿಸಲಿಟ್ಟಿದು ಸೂಕ್ತ. ಗ್ರಾಮೀಣ ಅಭಿವೃದ್ಧಿಗೆ ಯಾವುದೇ ವಿಶೇಷ ಯೋಜನೆಗಳನ್ನು ನೀಡದೆ, ಹಿಂದಿನ ಯೋಜನೆಗಳಿಗೆ ಅಧಿಕ ಸೌಲಭ್ಯಗಳ ಮುದ್ರೆ ಒತ್ತಿದ್ದಾರೆ. ಆದರೆ ಅನುದಾನದ ಮೊತ್ತವನ್ನು ೯೩೬೧ ಕೋಟಿಯಿಂದ ೯೭೨೮ ಕೋಟಿಗೆ ಹೆಚ್ಚಿಸಿದೆ ಹೈಲೈಟ್ಸ್. ಜೊತೆಗೆ ಗದಗದಲ್ಲಿ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ, ೪೩೯ ಹೊಸ ಗ್ರಾಮ ಪಂಚಾಯಿತಿ ರಚಿಸಲು ಮುಂದಾಗಿದೆ ಹೆಗ್ಗಳಿಕೆ. ಪ್ರಸ್ತುತ ಸಾಲಿನಲ್ಲಿ ಶಿಕ್ಷಣಕ್ಕೆ ೧೨೦೫ ಕೋಟಿ ಕಡಿತಗೊಳಿಸಿ ಶಿಕ್ಷಣದ ಮೂಲ ಸೌಕರ್ಯ ನಿರ್ಲಕ್ಷಣೆ ಧೋರಣೆಯಾಗಿದು, ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಲು ತಿಣುಕಾಡಿದ್ದು. ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಓದುತ್ತಿರುವ ೫೪.೫೪ ಲಕ್ಷ ಮಕ್ಕಳಿಗೆ ಉಚಿತ ಬೂಟು ನೀಡಲು ನಿರ್ಧರಿಸಿದೆ. ಮುಂದಿನ ವರ್ಷದ ಯೋಜನಾ ವೆಚ್ಚ ೭೨,೫೯೨ ಕೋಟಿ ರೂಪಾಯಿ. ರಾಜ್ಯದ ಸಮಗ್ರ ಅಭಿವೃದ್ಧಿಯ ಜವಾಬ್ದಾರಿ ಸರಕಾರದ ಮತ್ತು ಆಡಳಿತಯಂತ್ರದ ಮೇಲಿದೆ.

## ಅವಳಿಗಿಲ್ಲದ ಸಂಭ್ರಮ ಅವನಿಗಿದೆ...

ಅಂದು ಸಂಜೆ ಜಿಟಿ ಜಿಟಿ ಮಳೆ ಹನಿಯುತ್ತಿತ್ತು. ರಸ್ತೆಯ ಗುಂಡಿಗಳೆಲ್ಲ ನೀರು ತುಂಬಿಕೊಂಡು ಮೋಟಾರು ವಾಹನಗಳ ಕಾಯುತ್ತಾ ದಾರಿ ಹೋಕರಿಗೆ ಕೆಸರೆರಚಾಟಕ್ಕೆ ಆಹ್ವಾನಿಸುತ್ತಿದ್ದವು. ಮರಗಿಡಗಳೆಲ್ಲವೂ ಮಳೆಯಲ್ಲಿ ಮಿಂದು ಹಸಿರಿನಿಂದ ಕಂಗೊಳಿಸುತ್ತಿದ್ದವು. ರಸ್ತೆಯಲ್ಲಿ ಜನ ಸಂಚಾರ ಬಹಳ ವಿರಳವಾಗಿತ್ತು.

ಅದೇ ಬಸ್‌ಸ್ಟಾಪ್‌ನಲ್ಲಿ ನೀರು ಸೋರದ ಮೂಲೆಯೊಂದರಲ್ಲಿ ಆಕೃತಿಗಳೆರಡು ಸಿಮೆಂಟು ಬೆಂಚಿನಲ್ಲಿ ಅವನು ಮತ್ತು ಅವಳು ಅವರು ಬಹಳ ಹೊತ್ತಿನಿಂದ ಮಾತಿಲ್ಲದೆ ಕುಳಿತಿದ್ದರು. ಹರಿದ ಶೀಟಿನ ಮೇಲಿನ ಹನಿಗಳ ತಟಪಟ ಸದ್ದು ಸುಯ್ಯೆಂದು ತಣ್ಣಗೆ ಗಾಳಿ ಬೀಸುವ ಸದ್ದು ದೂರದಲ್ಲೆಲ್ಲೋ ಕಪ್ಪೆ ನಲಿದಾಡುವ ಸದ್ದು, ಮಳೆಯ ಬೋರ್ಗರೆತ ಎಲ್ಲವೂ ಸ್ಪಷ್ಟವಾಗಿ ಕೇಳಿಸುವ ಮಟ್ಟಿಗೆ ಅವರಲ್ಲಿ ಮೌನ ಆವರಿಸಿತ್ತು. ಆಗಸ ಕೆಂಪೇರ ತೊಡಗಿತು. ಸ್ವಲ್ಪ ಹೊತ್ತಿನಲ್ಲಿ ಕತ್ತಲಾಗುವ ಸೂಚನೆಯಂತೆ ಹಕ್ಕಿ–ಪಕ್ಷಿಗಳೆಲ್ಲವೂ ತಮ್ಮಮ್ಮ ಗೂಡುಗಳ ಕಡೆ ಪಯಣಿಸಿದವು. ಇಡಿ ಜಗತ್ತೇ ಸೂರ್ಯನಿಂದ ಎರವಲು ಪಡೆದ ಹೊಂಬಣ್ಣದಿಂದ ಅದ್ದಿ ತೆಗೆದಂತಿತ್ತು. ಆದರೇಕೋ ಅವನು ಮತ್ತು ಅವಳು ಇನ್ನು ಕುಳಿತೇ ಇದ್ದರು. ಅವರ ಕಣ್ಣುಗಳು ಮಾತ್ರ ಶೂನ್ಯಾಕಾಶವನ್ನು ದಿಟ್ಟಿಸುತ್ತಿದ್ದರೆ, ಮನಸ್ಸು ನೀರು ಬತ್ತಿ ಹೋದ ಬಾವಿಯಂತಿತ್ತು.

ಸುತ್ತಲು ಕತ್ತಲಾವರಿಸುತ್ತಿದ್ದಂತೆ ಅವರಿಬ್ಬರು ಎದ್ದು ಹೊರಟರು. ಮಳೆ ಹನಿಯುತ್ತಲೇ ಇತ್ತು. ರಸ್ತೆ ನಿರ್ಜನವಾಗಿತ್ತು. ಆ ತುಂತುರು ಮಳೆಯಲ್ಲಿ ನೆನೆಯುತ್ತ ಕೈ ಕೈ ಸೋಕಿಸಿಕೊಂಡು ಇಬ್ಬರು ನಡೆದರು. ರಸ್ತೆಯ ಗೂಡಂಗಡಿ ಮುಂದೆ ಒಂದಷ್ಟು ಮಂದಿ ನಿಂತಿದ್ದರು. ಅವನು



ಮತ್ತು ಅವಳು ಮುಂಚಿನಂತೆ ಹೆದರುವ ಪ್ರಮಯವೇ ಇಲ್ಲವೆಂದು ಆ ಮಂದಿಯ ಕಣ್ಣು ಕುಕ್ಕುವ ನೋಟಗಳಿಗೆ ಸೆಡ್ಡು ಹೊಡೆದು ಗೂಡಂಗಡಿ ಮುಂದೆ ಯಾರು ಇರಲೇ ಇಲ್ಲವೆಂಬತೆ ತಮ್ಮ ಪಾಡಿಗೆ ತಾವು ನಡೆದರು. ಹಿಂದೆಯೇ ಗೂಡಂಗಡಿ ಮಂದಿಯ ಗುಸು ಗುಸು ಪ್ರಾರಂಭವಾಯಿತು.

ರಸ್ತೆಯ ಬೀದಿ ದೀಪಗಳು ಉರಿದವು. ಸಲಾಗಿ ನಿಂತ ದೀಪಗಳು ಮರ್ಕ್ಯುರಿಯಂತೆ ಕಂಗೊಳಿ ಸುತ್ತಿದ್ದರಿಂದ ಕೆಳಗೆ ತುಂತುರು ಮಳೆಯನ್ನು ಲೆಕ್ಕಿಸದೇ ಹುಳ–ಉಪ್ಪಟೆಗಳು ಜಮಾಯಿಸಿದ್ದವು. ಅವನು ಮತ್ತು ಅವಳು ರಸ್ತೆಯುದ್ದಕ್ಕೂ ನಡೆಯುತ್ತಾ, ನಡೆಯುತ್ತಾ, ಒಮ್ಮೆ ಕತ್ತಲಲ್ಲಿ ಕರಗುತ್ತಾ. ಒಮ್ಮೆ ಮರ್ಕ್ಯುರಿ ಬೆಳಕಿನಲ್ಲಿ ಮೂಡುತ್ತಾ, ಮತ್ತೆ ಕರಗುತ್ತಾ, ಮತ್ತೆ ಮೂಡುತ್ತಾ ಸಾಗುತ್ತಿದ್ದಂತೆ ತೋರುತ್ತಿತ್ತು ದೂರದಿಂದ...

ಕೊನೆಗೂ ಬಂದೇ ಬಿಟ್ಟಿತು ಅಗಲಿಕೆ. ಇಲ್ಲಿಂದ ಅವಳದು ಒಂದು ದಾರಿಯಾದರೆ ಅವನದು ಮತ್ತೊಂದು ದಾರಿ. ಆವತ್ತಿನ ದಿನಇಲ್ಲೇ ಅವರಿಬ್ಬರ ಕುಂಟುಂಬ ಗಳೆರಡು ಕಿತ್ತಾಡಿ ಕೊಂಡಿದ್ದು. ಅವಳು ಅವನೆದೆಯೆತ್ತರಕ್ಕೆ ಬರುತ್ತಿದ್ದ ತನ್ನ ತಲೆಯನ್ನು ಅವನೆದೆ ಮೇಲಿಟ್ಟು ಅದೇ ಕೊನೆ ಬಾರಿಯೆಂಬತೆ ಗಾಢವಾಗಿ ಅಪ್ಪಿಕೊಂಡಳು. ಅವನು ಕೂಡ ಅವಳನ್ನು ಅಪ್ಪಿದ. ಆಗ ತಲೆಯೆತ್ತರಿಸಿ ಅವನೆಡೆಗೆ ನೋಡಿದಳು, ಆದರೆ ಇಬ್ಬರ ಕಣ್ಣಲ್ಲಿ ಮಿಂಚಿತ್ತು.

ಈಗ ಮಳೆ ಹನಿಯುವುದು ನಿಂತಿತ್ತು. ಎರಡು ಜೀವಗಳು ಕವಲುದಾರಿಯಿಂದಾಚೆ ಅಗಲಿ ತಂತಮ್ಮ ಮನೆ ಸೇರಿದರು. ಗೋಡೆ ಗಡಿಯಾರ ಹತ್ತು ಸಲ ಢಣ್ ಢಣ್ ಎಂದು ಹೊಡೆದು ಕೊಳ್ಳುವಷ್ಟರಲ್ಲಿ ಆ ಘಳಿಗೆಗಾಗಿ ಕಾದು ಕಾದು ಬಸವಳಿದಿದ್ದ ಅವಳಿಗೆ ಒಂದು ಯುಗ ಕಳೆದ ಅನುಭವವಾಗಿತ್ತು. ಅವಳು ತನ್ನ ಕೋಣೆ ಸೇರಿ ಡ್ರಾಯರಿನಿಂದ ಒಂದು ಚಿಕ್ಕ ಸೀಸೆಯನ್ನು ತೆಗೆದು ಕತ್ತಲಲ್ಲಿ ದೇವರ ವಿಗ್ರಹವನ್ನಿಡಿದು ಅವನನ್ನು, ದೇವರನ್ನು ನೆನೆದಳು ಮನದಿ. ಅದೇ ಸಮಯಕ್ಕೆ ಅತ್ತ ಕವಲುದಾರಿಯಾಚಿನ ಅವನ ಮನೆಯಲ್ಲಿ ಅವನು ತನ್ನ ಕೋಣೆಯಲ್ಲಿ ಅವಳನ್ನೇ ನೆನೆಯುತ್ತಾ ತಾವು ಮೊದಲೇ ನಿರ್ಧರಿಸಿದಂತೆ ಜೇಬಿನಿಂದ ಸೀಸೆಯೊಂದನ್ನು ಹೊರತೆಗೆದನು.

ಎಷ್ಟು ಹೊತ್ತಾದರು ಕೋಣೆಯೊಳಗಿನಿಂದ ಉತ್ತರ ಬಾರದಿದ್ದರಿಂದ ಎರಡು ಕಡೆ ಮನೆಯವರು ಬಾಗಿಲು ಮುರಿದು ಒಳ ನುಗ್ಗಿದರು. ಅವಳು ಆಸ್ಪತ್ರೆಯಲ್ಲಿ ತೀರಿಕೊಂಡಳು. ಅವನು ಸೀಸೆಯ ಅರ್ಧದಷ್ಟು ಮಾತ್ರ ಕುಡಿದಿದ್ದರಿಂದ ಅವನನ್ನು ಉಳಿಸಲು ಸಾಧ್ಯವಾಯಿತೆಂದು ಡಾಕ್ಟರ್ ನಿಟ್ಟುಸಿರಿಟ್ಟರು.

ಅವಳ ಮನೆಯವರು ಅವಳ ಶ್ರಾದ್ಧ ಕಾರ್ಯಕ್ಕೆ ಓಡಾಡುತ್ತಿದ್ದರೆ, ಅವನ ಮನೆಯವರು ಅವನಿಗೆ ಹೆಣ್ಣು ಗೊತ್ತು ಮಾಡಿ ಮದುವೆ ಶಾಸ್ತ್ರಕ್ಕೆ ಅಣಿಯಾಗುತ್ತಿದ್ದರು. ಅವಳ ಪ್ರೀತಿ ನೆನಪಿನ ಸಮಾಧಿಯ ಮೇಲೆ ಅವನ ಲಗ್ನದ ಸಂಭ್ರಮ ಮನೆ ಮಾಡಿತ್ತು ಅಂದು... **–ನಂದಿನಿ ಕೆ. ಎಲ್**

# ವಾಚಕರ ವಾಣಿ

## ದುಂದುವೆಚ್ಚಕ್ಕೆ ಕಡಿವಾಣ ಹಾಕಿ.

**ಮೈ**ಸೂರು ವಿಶ್ವವಿದ್ಯಾನಿಲಯ 2015 ಜೂನ್‌ನಿಂದ 100 ವರ್ಷಗಳ ಶತಮಾನೋತ್ಸವ ಸಂಭ್ರಮ ಅದಕ್ಕಾಗಿ ಭಾರಿ ಸಿದ್ದತೆಗಳು ನಡೆಯುತ್ತಿವೆ. ಬೃಹತ ದ್ವಾರ, ಪಾದಚಾರಿ ಮಾರ್ಗ, ಹೊಸ ಕಟ್ಟಡ, ಹುಲ್ಲುಗಾವಲು ಕಾಮಗಾರಿಯಂತಹ ಅಬಿವೃದ್ಧಿ ಕಾರ್ಯಗಳು ಜೋರಾಗಿ ನಡೆಯುತ್ತಿವೆ.

ಹಿಂದೊಮ್ಮೆ ಕಗ್ಗಾಡಾಗಿದ್ದ, ಆದರೆ, ಅದೆಲ್ಲವನೂ ಕಳೆದುಕೊಂಡಿರುವ ಮಾನಸಗಂಗೋತ್ರಿಯ ಬೋಳು ತಲೆಯ ಮೇಲೆ ನವೀಕರಣ ಕಾರ್ಯ ನಡೆಯುತ್ತದೆ. ಹುಲ್ಲುಗಾವಲು ನಿರ್ಮಾಣ ಆನೆ ಸಾಕಿದಂತೆ ಎಂಬುದು ತಿಳಿದಿರುವ ವಿಚಾರ. ಅದರ ನಿರ್ವಹಣೆಗಾಗಿ ಲಕ್ಷಾಂತರ ರೂಪಾಯಿ ಬಿಡುಗಡೆಯಾಗಿದೆ. ಈ ಹಣವನ್ನು ಕಾಡು ಬೆಳೆಸಲು, ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಒದಗಿಸಲು ಅಥವಾ ಕುಕ್ಕರಹಳ್ಳಿ ಕೆರೆಯ ಅಬಿವೃದ್ಧಿಗೆ ಬಳಸಬಹುದಾಗಿತ್ತು.

ಶತಮಾನೋತ್ಸವಕ್ಕಾಗಿ ವಿ.ವಿ ಆಡಳಿತ ಮಂಡಳಿ ಈ ಯಾವುದ ಕಡೆ ಗಮನಿಸದೆ ಏಕ ಪಕ್ಷಿಯ ಮುಖವಾದ ನಿರ್ದಾರ ತೆಗೆದುಕೊಂಡಿದೆ. ವಿವಿಯ ಬುದ್ಧಿಜೀವಿಗಳು ಮೌನಕ್ಕೆ ಶರಣಾಗಿದ್ದು ಕಳವಳ.

**–ನಿಸರ್ಗ. ಪತ್ರಿಕೋದ್ಯಮ ವಿಭಾಗ**

## ಹೆಚ್ಚಿದ ನಾಯಿ ಹಾವಳಿ

**ಮಾ**ನಸ ಗಂಗೋತ್ರಿಯ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯದಲ್ಲಿ ನಾಯಿಗಳ ಸಂಖ್ಯೆ ಹೆಚ್ಚಿದ್ದು ಅವುಗಳಿಗೆ ಉತ್ತಮ ಆಶ್ರಯ ತಾಣವಾಗಿದೆ. ರಾತ್ರಿವೇಳೆಯಲ್ಲಿ ಓದುವ ಹಾಗೂ ನಿದ್ರಿಸುವ ಸಮಯದಲ್ಲಿ ಅವುಗಳು ಬೊಗಳುವುದರಿಂದ ಶಬ್ದವು ಹೆಚ್ಚು ಕಿರಿಕಿರಿ ಉಂಟುಮಾಡುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ರಾತ್ರಿ ಪಾಳಿಯ ವಾಚ್‌ಮನ್ ಕೂಡ ಮುಂದಾಗುತ್ತಿಲ್ಲ. ಆದರಿಂದ, ಇದಕ್ಕೆ ಸಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.

**–ಸೌಮ್ಯ ಸಮಾಜಶಾಸ್ತ್ರ ವಿಭಾಗ**

# ಹೆಂಡ್ ಕುಡುಕನ ಯ(ಮ)ಂಗ್ ಶಿಷ್ಯ ಗಳಿಗೆಸಿದ್ದ


ಒಬ್ಬ ಜಿಲ್ಲಾ ಮಟ್ಟದ ಕುಡಿತದ ಸ್ಪರ್ಧೆಯಲ್ಲಿ ಸ್ಪರ್ಧಿಸಿ, ಮೊದಲನೆ ಬಹುಮಾನ ಗಳಿಸಿ ಜಿಲ್ಲೆಯಾದ್ಯಂತ ಹೆಂಡ್ ಕುಡಕ ಎಂದೆ ಪ್ರಸಿದ್ದಿಗೆ ಬಂದ. ಇದೆ ಜನಪ್ರಿಯತೆಯ ಮೇಲೆ ಎಲೇಕ್ಷನಲ್ಲಿ ಗೆದ್ದು ಕೊನೆಗೆ ಗ್ರಾಮ ಪಂಚಾಯತಿಯ ಚೇರ್‌ಮನ್ ಆದ. ತನ್ನ ಆಸ್ತಿಯಲ್ಲಿ ಅರ್ಧ ಕುಡಿತಕ್ಕೆ, ಇನ್ನುಳಿದ ಆಸ್ತಿ ಎಲೇಕ್ಷನಲ್ಲಿ ಕಳೆದು ಕೊಂಡ. ಸದ್ಯದಲ್ಲಿ ಅನ್ನ ಭಾಗ್ಯ ನಂಬಿ ಬದುಕುತ್ತಿರುವ ಮಾಜಿ ಚೇರ್‌ಮನ್ ಹೆಂಡ್ ಕುಡುಕ. ಇನ್ನೊಬ್ಬ ಎಸ್‌ಎಸ್‌ಎಲ್‌ಸಿ ರ್‍ಯಾಂಕಲ್ಲಿ ಪಾಸ ಮಾಡಲೆಂದು ವರ್ಷ ಪೂರ್ತಿ ಕಷ್ಟಪಟ್ಟು ಓದಿದ, ಎಕ್ಸಾಮ್‌ನಲ್ಲಿ ಉತ್ತರ ಪತ್ರಿಕೆಗೆ ರಿಜಿಸ್ಟರ್ ನಂಬರ್ ಹಾಕೊದನ್ನೇ ಮರೆತ ಬ್ರಿಲಿಯಂಟ್ ಸ್ಟೂಡೆಂಟ್ ಗಳಿಗೆಸಿದ್ದ. ಓದಿಗೆ ರಾಜಿನಾಮೆ ನೀಡಿ ಹೆಂಡ್ ಕುಡುಕನ ಹತ್ತಿರ ಶಿಷ್ಯನಾಗಿ ರಾಜಕೀಯ ದೀಕ್ಷೆ ಪಡೆಯುತ್ತಿರುವ ಯ(ಮ)ಂಗ್ ಮ್ಯಾನ್ ಗಳಿಗೆಸಿದ್ದ. ಈ ಇಬ್ಬರ ನಡುವಿನ ಪ್ರಸ್ತುತ ಕಾಲಘಟ್ಟದ ವಿದ್ಯಮಾನಗಳ ಸಂಭಾಷಣೆ.

**ಗಳಿಗೆಸಿದ್ದ: ದೇಶನ ರಾಜಕೀಯ ಮುಕ್ತ ಕಂಟ್ರಿ ಮಾಡಿದ್ರೇ ಹೇಗೆ?**
ಹೆಂಡ್ ಕುಡುಕ: ರಾಜಕೀಯ ಮುಕ್ತ ದೇಶ, ಚರಂಡಿ ಮುಕ್ತ ರಾಷ್ಟ್ರ.

**ಗಳಿಗೆಸಿದ್ದ: ಸೈನ್ಯಾಧಿಕಾರಿ ಸಾಹಿತಿಯಾದರೆ ಹೇಗೆ?**
ಹೆಂಡ್ ಕುಡುಕ: ಓದುಗರೆ ಅವನ ಎದ್ದುರಾಳಿ ಸೈನ್ಯ.

**ಗಳಿಗೆಸಿದ್ದ: ಜಾತಿಗಣತಿಯ ಉದ್ದೇಶವೆನ್ನು ಗುರುಗಳೇ?**
ಹೆಂಡ್ ಕುಡುಕ: ಅಳುವಿನ ಅಂಚಿನಲ್ಲಿರುವ ಜಾತಿಗುರುತಿಸಿ, ಅದರ ಮೇಲೆ ತಮ್ಮ ಉಳಿವಿನ ರಾಜಕೀಯ ಮಾಡೋಕೆ.

**ಗಳಿಗೆಸಿದ್ದ: ಮುಂದಿನ ವರ್ಷದಿಂದ ರಾಜ್ಯ ಸರ್ಕಾರ ಉತ್ತಮ ವಿಲನ್ ಪ್ರಶಸ್ತಿ ಕೊಟ್ಟರೆ, ಅದಕ್ಕೆ ಏನೆಂದು ಕರೆಯಬಹುದು?**
ಹೆಂಡ್ ಕುಡುಕ: 'ಕರ್ನಾಟಕದ ರಾವಣ' ಅಥವಾ 'ಕನ್ನಡದ ದುರ್ಯೋದನ'.




**ಗಳಿಗೆಸಿದ್ದ: ಇತ್ತಿಚಗೆ ತರುಣ ಬರಹಗಾರರ ಸಂಖ್ಯೆ ಹೆಚ್ಚಾಗುತ್ತಿದೆಯಲ್ಲವೆ?**
ಹೆಂಡ್ ಕುಡುಕ: ಚಂದಮಾಮ ಕತೆ ಓದುವ ವೃದ್ಧರ ಸಂಖ್ಯೆ ದ್ವಿಗುಣ ಆಗುತ್ತಿರುವುದರಿಂದ.

**ಗಳಿಗೆಸಿದ್ದ: ಧೂಮಮುಕ್ತ ಪ್ರದೇಶ ಎಂದರೂ ಧೂಮಪಾನ ಮಾಡುವುದೆಕ್ಕೆ?**
ಹೆಂಡ ಕುಡುಕ: ಅದಕ್ಕೆ ಕಾರಣ, ಅವರಿಗೆ ಧೂಮಪಾನ ಮಾಡುವುದನ ನೆನಪಿಸುತ್ತೆ.

**ಗ ಸಿದ್ದ: ಹಿಂದಿನ ಸಾಹಿತಿಗೂ, ಇಂದಿನ ಸಾಹಿತಿಗಳಿಗೂ ಇರುವ ವ್ಯತ್ಯಾಸವೇನು?**
ಹೆಂಡ್ ಕುಡುಕ: ಹಿ ಮತ್ತು ಇ. ಹಿಂದಿನ ಸಾಹಿತಿಗಳಿಗೆ ಅ ದಿಂದ ಹಿ ವರೆಗೂ ಗೊತ್ತು, ಇಂದಿನ ಸಾಹಿತಿಗಳಿಗೆ ಅ ಆ ಇ ಮಾತ್ರ ಗೊತ್ತು.

**ಗಳಿಗೆಸಿದ್ದ: ಬಡವ ಹೇಳುವ ಮಾತಿಗಿಂತ ಶ್ರೀಮಂತನ ಮಾತಿಗೆ ಹೆಚ್ಚು ಬೆಲೆ ಏಕೇ ಗುರುಗಳೇ?**
ಹೆಂಡ್ ಕುಡುಕ: ಬಡವನ ನಾಲಿಗೆ ಅವನ ಬಾಯಲ್ಲಿ, ಶ್ರೀಮಂತನ ನಾಲಿಗೆ ಅವನ ಜೇಬಲ್ಲಿ.

**ಗಳಿಗೆಸಿದ್ದ: ಇಂದಿನ ಕಾಲೇಜು ಕನ್ಯೆಯರ ಕೈ ಬಳೆ ಕಾಣೆಯಾತ್ತಿದೆ ಅಲ್ಲವೆ ಗುರುವರ್ಯ?**
ಹೆಂಡ್ ಕುಡುಕ: ಶಬ್ದ ಮಾಲಿನ್ಯ ತಡೆಗಟ್ಟಲು ಸಹಕರಿಸುತ್ತಿದ್ದಾರೆ.

**ಗಳಿಗೆಸಿದ್ದ: ಈ ಬ್ರಹ್ಮಾಂಡದ ಸೃಷ್ಟಿ ಹೇಗಾಯಿತು ಗುರುಗಳೆ?**
ಹೆಂಡ್ ಕುಡುಕ: ಇರು ನಮ್ಮ ಸಿದ್ರಾಮಣ್ಣನಿಗೆ ಹೇಳಿ ಒಂದು ಆಯೋಗ ರಚನೆ ಮಾಡಿ ತಿಳಿಸ್ತಿನಿ.

**ಗಳಿಗೆಸಿದ್ದ: ಜೀವಿಸುವುದಕ್ಕೂ, ಸಾಧಿಸುವುದಕ್ಕು ಏನು ವ್ಯತ್ಯಾಸ?**
ಹೆಂಡ್ ಕುಡುಕ: ಕತ್ತೆ, ನಾಯಿ, ಕುರಿಗಳು ಜೀವಿಸುತ್ತವೆ. ಮಾನವನಾಗಿ ಸಾಧಿಸ ಹೊರಟವರಲ್ಲಿ ಹಲವರು ಜೀವಿಸುತ್ತಾರೆ.

**ಗಳಿಗೆಸಿದ್ದ: ಕಾರ್ಪೋರೆಟರ್ ಬುದ್ದಿವಂತರೋ, ರಾಜಕಾರಣಿಗಳೋ?**
ಹೆಂಡ್ ಕುಡುಕ: ಬುದ್ದಿವಂತರು ಇಬ್ಬರು ಅಲ್ಲ, ಜನರು ಮಾತ್ರ ದಡ್ಡರು.

**ಗಳಿಗೆಸಿದ್ದ: ಭಾರತ ಶ್ರೀಮಂತ ರಾಷ್ಟ್ರ ಆಗೋದು ಯಾವಾಗ?**
ಹೆಂಡ್ ಕುಡುಕ: ಎಲ್ಲಾ ರಾಷ್ಟ್ರಗಳು ಬಡ ದೇಶಗಳಾದ್ದಾಗ.

**ಗಳಿಗೆಸಿದ್ದ: ಸಿದ್ರಾಮಣ್ಣನವರು ಅನ್ನ ಭಾಗ್ಯಕ್ಕೆ ಎಪಿಎಲ್ ಕಾರ್ಡ್‌ದಾರರನ್ನು ಸೇರಿಸಿದಾರಂತೆ?**
ಹೆಂಡ್ ಕುಡುಕ: ಅದು ಸ್ಪೆಲಿಂಗ್ ಮಿಸ್ಟೆಕು ಐಪಿಎಲ್ ಆಗಬೇಕಾಗಿತ್ತು, ಎಪಿಎಲ್ ಅಂತ ಆಗಿದೆ.

**ಗಳಿಗೆಸಿದ್ದ: ಅತ್ತೆ ಸೊಸೆ ಜಗಳದಲ್ಲಿ ಮಗನ ಪಾತ್ರ...?**
ಹೆಂಡ್ ಕುಡುಕ: ಅವರವರ ಕರ್ಮ ಅವರಿಗಯ್ಯ, ಪರರ ಚಿಂತೆ ನಮಗೆಕಯ್ಯ 'ವಾಣಿ'ಯ ಜಪ ಮಾಡುವುದು.

**ಗ ಸಿ: ಸಾಹಿತಿ ಮತ್ತು ರಾಜಕಾರಿಣಿಗಳಲ್ಲಿ ಜನರ ಚಪ್ಪಾಳೆ ಯಾರಿಗೆ?**
ಹೆಂ ಕು: ರಾಜಕಾರಣಿಗಳಿಗೆ, ಜನರ ಜೇಬಿನಲ್ಲಿ 100 ರೂಪಾಯಿ ಇದೆ.

**–ಮಲ್ಲಿಕಾರ್ಜುನ**

# ಮುಸುಕು ಕವಿದ ಮನದೊಳಗೆ...

ಇವತ್ತೂ ಯಾಕೋ ಬೇಸರ. ಮನಸ್ಸು ಮುದುಡಿ ಹೋಗಿದೆ. ಯಾರ ಮೇಲೋ ರೇಗು. ಯಾತಕ್ಕೊ ಸಿಡಿಮಿಡಿ. ಹೀಗೆ ಹೇಳೊದು ಸುಲಭ. ಬದುಕಿನ ಹಾದಿಯಲ್ಲಿ ಮೋಸ ಮಾಡುವುದು ಮಾಡಿಸಿಕೊಳ್ಳುವುದು ಅನಿವಾರ್ಯ. ನನ್ನ ಅಗಾಧ ಪ್ರೀತಿಯ ನಡುವೆಯೂ ನೀನು ನನಗೆ ವಂಚಿಸಿದೆ ಎಂಬ ಭಾವ, ನನ್ನಲ್ಲಿ ಸುಳಿದು ಹೋಗುತ್ತಿರುತ್ತದೆ.

ಅಜ್ಜ–ಅಜ್ಜಿಯಾಗಿ ಮುಸ್ಸಂಜೆಯಲ್ಲಿ ಕುಳಿತ ಪ್ರೀತಿಯ ಪುನರಾವಲೋಕನ ಮಾಡಿಕೊಳ್ಳಬೇಕೆಂಬ ನನ್ನ ಹುಚ್ಚು ಆಸೆಗೆ ಏನು ಹೇಳಲಿ? ಬದುಕು ಬರಡಾದ ಹೊತ್ತಿನಲ್ಲಿ ಪ್ರೀತಿಯ ನೆನಪನ್ನು ಮೆಲುಕು ಹಾಕುವುದು! ದುಡಿಯುವ ಹೊತ್ತಲ್ಲಿ ವಿಮುಖರಾಗಿ ನಿಲ್ಲುವುದು! ನಿನ್ನಿಂದ ಕಲಿತ ಜೀವನದಾರಿ!.

ನಿಜ ಹೇಳು, ಇದೆಲ್ಲ ನನ್ನಿಂದ ಕಳಚಿಕೊಳ್ಳುವುದಕ್ಕೆ ಹೂಡಿದ ಕುಟಿಲೋಪಾಯವಿರಬಹುದೆ? ಚಿನ್ನು ಹೀಗೇಕೆ ಮಾಡಿದೆ? ನೀನು ಪಾದ ಊರುವೆಡೆಯಲ್ಲಿ ನನ್ನೆರಡು ಅಂಗೈ ಇರಿಸಿ ನಡೆಸಿದೆ. ಸಾಕಾಗಿ ಹೋಯಿತೆ ನನ್ನ ಉಸಿರುಗಟ್ಟಿಸುವ ಪ್ರೀತಿ? ಒಂದು ಕಡೆ ಗುಟುಕು ಪ್ರಿತಿಗಾಗಿ ಅನುಕ್ಷಣವೂ ಹಂಬಲಿಸುವವರು, ಇನ್ನೊಂದು ಕಡೆ ಉಂಡು ತೇಗಿ ಬಾಳೆ ಎಲೆಯಂತೆ ಎಂಜಲು ಪ್ರೀತಿಯನ್ನು ಬೀದಿಗೆಸೆವ ನಿನ್ನಂಥವರು! ಇದೇ ಅಲ್ಲವೇ ಪ್ರೀತಿ ಎಂಬ ಮಾಯೆ!

ದಿನಗಳ ಸಾಲು ಅರುಣೋದಯದ ಶುಭ ಸೂಚನೆಯಂತೆ ಮನಸ್ಸನ್ನು ಆವರಿಸಿದ್ದವು. ನೋಡ ನೋಡುತ್ತಿದ್ದಂತೆ ನೀನು ರೂಪವತಿಯಾದೆ. ಸುಪ್ರಭಾತದ ಅರುಣ ಕಿರಣಗಳು ಪ್ರತಿಗಳಿಗೆಗೂ ಒಲಿತು ವರ್ಣಮಯವೂ, ಶೋಭಯಮಾನವೂ ಆದಂತೆ ನಾನು ಗಮಗಮ ಅರಳಿಬಿಟ್ಟೆ. ನಿನ್ನ ಬಣ್ಣಿಸಲು, ಪೂಜಿಸಲು, ಅಮರ ಪ್ರೇಮಿಯಂತೆ ರೆಡಿಯಾಗಿ ನಿಂತಿದ್ದೆ.

ಲೋಕದ ಬಾಯಿ ಮುಚ್ಚಿಸುವುದು ಹೇಗೆ? ಉತ್ತರ ಸಿಗದ ಪ್ರಶ್ನೆಗಳಿಗೆ ಉತ್ತರ ಹುಡುಕುವುದೇ ವ್ಯರ್ಥ. ಸುಮ್ಮನೆ ಕೆಲಸ ಮಾಡುತ್ತಾ ಹೋಗಬೇಕು. ಲೋಕ ಒಮ್ಮೆ ಗೋಣಗಿ, ಒಮ್ಮೆ ಮುನಿದು, ಒಮ್ಮೆ ಮೆಚ್ಚಿ, ಒಮ್ಮೆ ಮತ್ಸರದಿಂದ ನೋಡಿ, ಒಮ್ಮೆ ಕೊಂಡಾಡಿ ಸುಮ್ಮನಾಗುತ್ತದೆ. ಲೋಕವೆಂದರೆ ನಮ್ಮೊಳಗಿನ ಭಾವ–ಭಾವನೆಗಳ ಪ್ರತಿರೂಪ. ಅಲ್ಲಿ ಯಾವ ಟೀಕೆ–ಮೆಚ್ಚುಗೆಗಳೂ ಶಾಶ್ವತವಲ್ಲ. ನಾವು ಏನು ಮಾಡುತ್ತಿದ್ದೇವೆಯೋ ಆ ಕೆಲಸ ನಮಗೆ ಆನಂದ, ರೋಚಕತೆಯನ್ನು ಒದಗಿಸಿದರೆ ಅಷ್ಟು ಸಾಕು ಬದುಕು ಸಾರ್ಥಕ!

ಕಣ್ಣಲ್ಲಿ ಹಣತೆ, ಬೊಗಸೆಯಲ್ಲಿ ಹೂ, ಎದೆಯಲ್ಲಿ ಅಮೃತಮಯ, ಪ್ರೀತಿ ದ್ರಾವಕ ತುಂಬಿದ ಕಳಸ, ಅಬ್ಬಾ! ಪ್ರೀತಿ ಹೇಗೆ ಮೊಳೆಯುತ್ತದೆ! ಎಂಬ ಕಲ್ಪನಾಲೋಕವೇ ನಿನ್ನ ರೂಪ ತಾಳಿ ಎದುರು ನಿಂತಾಗ ಮೂಕನಾಗಿ ಹೋಗಿದ್ದೆ.

ಹುಡುಗಿಯರು ದಡ್ಡಿಯರು, ಭಾವುಕರು ಅಂತೆಲ್ಲಾ ನಾನು ನಿನ್ನ ಚುಡಾಯಿಸುತ್ತಿದೆ. ಈಗ ಎಲ್ಲಾ ಉಲ್ಟಾ ಆಯಿತು. ನೀನು ಕಟುವಾದೆ. ನಾನು ಮೆದುವಾದೆ. ಪ್ರತಿಕ್ಷಣ ನಾನಿಲ್ಲಿ ಹಂಬಲಿಸುವಾಗ ನಿನಗಲ್ಲಿ ಏನು ಅನ್ನಿಸುವುದಿಲ್ಲವೇ? ಅಂಥ ಕಾರುಣ್ಯ ನಿನಗೆ ಹೇಗೆ ಬಂತು? ಇದರಿಂದ ಸಾಧಿಸುವ ಪುರುಷಾರ್ಥವಾದರೂ ಏನು? ನಾನಂತೂ ಎದೆ ಬಾಗಿಲಲ್ಲಿ ಹಣತೆ ಇಟ್ಟು ನಿನ್ನದಾರಿಯ ಕಾಯುತ್ತ ಕುಳಿತು ಬಿಟ್ಟಿದ್ದೇನೆ. ಎಣ್ಣೆ ಖಾಲಿಯಾಗುವುದೆಂಬ ಪರಿಜ್ಞಾನ ನನಗಿಲ್ಲದಿದದ್ದರೂ ಸರಿಯೇ ಗೆಳತಿ!.

**–ನಂಜುಂಡಸ್ವಾಮಿ ಎಮ್**

# ರೋಚಕತೆಯ ಮಾಸ್ಟರ್ ಮೈಂಡ್

**ಚಿತ್ರ : ಮಾಸ್ಟರ್ ಮೈಂಡ್**
**ನಿರ್ಮಾಪಕ .ನಿರ್ದೇಶಕ ನಾಯಕ ಕುಮಾರ್ ಗೋವಿಂದ್**
**ತಾರಾಗಣ; ರಾಜವರ್ದನ್, ತಮನ್ನಾ, ದಿವ್ಯಾಗೌಡ, ಭಕ್ತಿ, ಬುಲೇಟ್ ಪ್ರಕಾಶ್ ಮುಂತಾದವರು.**




ಆರಂಭದಿಂದ ಅಂತ್ಯದವರೆಗೂ ರೋಚಕತೆಯ ಜೊತೆಗೆ ಕುತೂಹಲ ಮೂಡಿಸುವ ಚಿತ್ರವೇ 'ಮಾಸ್ಟರ್ ಮೈಂಡ್' ನಿರ್ಮಾಪಕ, ನಿರ್ದೇಶಕನ ಹೊಣೆ ಹೊತ್ತಿರುವ ಕುಮಾರ್ ಗೋವಿಂದ್ ಕಥೆಗೆ ಹೆಚ್ಚಿನ ಮಹತ್ವ ನೀಡಿದ್ದಾರೆ.

ಒಂದು ಚಿಕ್ಕ ಎಳೆ ಹೊಂದಿರುವ ಸೇಡಿನ ಕಥೆಯನ್ನು ಅತ್ಯಂತ ಕುತೂಹಲ ಭರಿತವಾಗಿ ಹೇಳಿರುವ ನಿರೂಪಣೆ ಶೈಲಿಯು ಎಲ್ಲಾ ಪ್ರೇಕ್ಷಕ ವರ್ಗವನ್ನು ಗಮನ ಸೆಳೆಯುವಂತಿದೆ ನಿರ್ಮಾಣ ಕಂಪನಿಯಲ್ಲಿ ಆರ್ಕಿಟೆಕ್ಟ್ ಆಗಿರುವ ರಾಜ್‌ಪತ್ನಿ ಅನುಜೊತೆಗೆ ಬ್ಯಾಂಕಾಕ್‌ಗೆ ಬಂದಾಗ ದುಷ್ಕರ್ಮಿಗಳು ಆಕೆಯನ್ನು ಅಪಹರಿಸುತ್ತಾರೆ. ನಿಗೂಢ ಮನೆ ಒಂದರಲ್ಲಿ ಮೂರು ವರ್ಷಗಳ ಕಾಲ ರಾಜ್‌ನನ್ನು ಕೂಡಿಹಾಕಿ ಮಾನಸಿಕ ಹಿಂಸೆ ಕೊಡುತ್ತಾರೆ, ಆ ಹಿಂಸೆ ಏಕೆಂಬುದು ಚಿತ್ರ ಮುಂದೆ ಸಾಗಿದಂತೆ ಪ್ರೇಕ್ಷಕರಿಗೆ ಅರಿವಾಗುತ್ತಾ ಹೋಗುತ್ತದೆ. ಶೀರ್ಷಿಕೆ ಜೊತೆಗೆ ಇರುವ 'ಗೇಮ್ ಆಫ್ ಡೆತ್' ಎಂಬ ಈ ಬರಹವು ಈ ಕಥೆಗೆ ಪೂರಕವಾಗಿದೆ ಹಾಗೂ ರಾಜ್ ಅಥವಾ ಆತನನ್ನು ಹಿಂಸಿಸುವ ದುಷ್ಟನ ಪೈಕಿ ಸಾವಿನ ಆಟದಲ್ಲಿ ಯಾರು ಗೆಲ್ಲುತ್ತಾರೆ ಎಂಬುದೇ ಸಸ್ಪೆನ್ಸ್!. ಇಲ್ಲಿ ಈ ಸಾವಿನ ಆಟವು ಅತ್ಯಂತ ಆಕರ್ಷಕವಾಗಿದ್ದು ಅತ್ಯಂತ ವಿಶೇಷವಾದ ರೀತಿಯಲ್ಲಿ ಕಥೆ ಹೆಣೆಯಲಾಗಿದೆ, ಇತ್ತೀಚಿನ ದಿನಗಳಲ್ಲಿ ಮಚ್ಚು ಲಾಂಗುಗಳದ್ದೇ ಕಾರುಬಾರಾಗಿದ್ದು ಪ್ರೇಕ್ಷಕರಿಗೆ ಒಂದುರೀತಿಯ ಸಹಜ ಭಾವನೆ ಉಂಟಾಗಿತ್ತು ಈ ಸಿನಿಮಾ ನೋಡಿದ ಪ್ರತಿಯೊಬ್ಬರು ಇದರಲ್ಲಿ ಒಂದು ಹೊಸತೆರನಾದ ಸಾಹಸ ದೃಶ್ಯಗಳನ್ನು ಕಣ್ತುಂಬಿಕೊಳ್ಳುವರು ಎಂದರೆ ತಪ್ಪಾಗಲಾರದು ಈ ಮೂಲಕ ದುಷ್ಟರನ್ನು ಶಿಕ್ಷಿಸುವ ಪರಿ ಅತ್ಯಂತ ಮನಮೋಹಕ ಹಾಗೂ ಹೊಸತನದಿಂದ ಕೂಡಿದೆ. ನಿರ್ಮಾಪಕ ನಿರ್ದೇಶಕ ಕುಮಾರ್ ಗೋವಿಂದ್ ಚಿತ್ರದ ನಾಯಕನಾಗಿ ಮುನ್ನುಗ್ಗಿದ್ದಾರೆ. ಹಾಗೆಯೇ ಚಿತ್ರದ ಮಧ್ಯಭಾಗದಲ್ಲಿ ಪಾದಾರ್ಪಣೆ ಮಾಡುವ ಇವರು ತಮ್ಮ ಪಾತ್ರದ ಗಟ್ಟಿತನವನ್ನು ಕಾಯ್ದುಕೊಂಡು ಒಂದು ಹೊಸ ತಿರುವನ್ನು ತಂದುಕೊಡುವಲ್ಲಿ ನಿರತರಾಗುತ್ತಾರೆ. ಚಿತ್ರದ ಎಲ್ಲಾ ವಿಭಾಗದಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ ಅದರಲ್ಲೂ ಬಾಲಿವುಡ್‌ನ ಸುನೀಲ್ ಶೆಟ್ಟಿಯಂತೆ ರಾಜವರ್ಧನ್ ಹೊಡೆದಾಟದ ದೃಶ್ಯದಲ್ಲಿ ಹೆಚ್ಚುಗಮನ ಸೆಳೆಯುತ್ತಾರೆ, ನಾಯಕಿಯಾಗಿ ಕಾಣಿಸಿಕೊಂಡಿರುವ ತಮನ್ನ ,ದಿವ್ಯಾಗೌಡ ಈ ಚಿತ್ರದಲ್ಲಿ ಹೆಚ್ಚೇನು ನಟನೆ ಇಲ್ಲವಾದರು ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನೂ ಎ,ಸಿ ಮಹೇಂದರ್ ಕ್ಯಾಮರಾ ಕೈಚಳಕ ಮೆಚ್ಚಲೇಬೇಕು ಬ್ಯಾಂಕಾಕ್ ಮತ್ತು ಹಾಂಕಾಂಗ್ ದೃಶ್ಯಗಳನ್ನು ಮನಮೋಹಕವಾಗಿ ಚಿತ್ರಿಸಿದ್ದು ಪ್ರೇಕ್ಷಕರ ಕಣ್ಣಿಗೆ ಪರೋಕ್ಷವಾಗಿ ಈ ದೇಶಗಳ ಪ್ರಮುಖ ಪ್ರವಾಸಿ ತಾಣಗಳನ್ನು ತೋರಿಸಿ ಮುದ ನೀಡುವಂತೆ ಮಾಡಿದ್ದಾರೆ. ಒಟ್ಟಾರೆಯಾಗಿ ಚಿತ್ರ ಪ್ರೇಕ್ಷಕರ ಕಾಸಿಗೆ ಮೋಸ ಮಾಡುವುದಿಲ್ಲ ಪ್ರೀತಿ ಪ್ರೇಮ ಪ್ರಣಯ ಚಿತ್ರನೋಡಿ ಬೇಸತ್ತಿದ್ದ ಪ್ರೇಕ್ಷಕರಿಗೆ ಸಾವಿನ ಆಟದ ಕಥೆಯುಳ್ಳ ಸಸ್ಪೆನ್ಸ್ ಥ್ರಿಲ್ಲರ್ ಬ್ರೇಕ್ ಮಾಸ್ಟರ್ ಮೈಂಡ್ ಹೆಸರಿನಲ್ಲಿ ನೀಡಿದೆ.

**–ನಿಂಗರಾಜು ಸಿ**

ಮಾನಸ ಗಂಗೋತ್ರಿ

# ಪುಸ್ತಕ ವಿಮರ್ಶೆ

## ಅಕ್ಕ

ಪಿ.ಲಂಕೇಶ್

ಪಿ.ಲಂಕೇಶ್‌ರವರು ೧೯೯೧ರಲ್ಲಿ ಅಕ್ಕ ಕಾದಂಬರಿಯನ್ನು ಬರೆದರು. ಅತ್ಯದ್ಭುತ ಕಾದಂಬರಿ ಇದಾಗಿದೆ. ನೈಜವಾದ ಘಟನೆ ಹಾಗೂ ಕಥೆಯಾಗಿದೆ. ಈ ಕಾದಂಬರಿಯೂ "ದೇವೀರಿ" ಎಂಬ ಚಲನಚಿತ್ರವಾಗಿ ಮೂಡಿಬಂದು ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಗಿಟ್ಟಿಸಿಕೊಂಡಿದೆ.

ಕೊಳೆಗೇರಿ ಪ್ರದೇಶದ ಜನಜೀವನದ ದಿನನಿತ್ಯದ ಬದುಕು, ಜೀವನಶೈಲಿಯನ್ನು ಬಿಚ್ಚಿಡಲಾಗಿದೆ. ಆಡಳಿತವರ್ಗದವರ ದುರಾಡಳಿತ, ರಾಜಕೀಯ ಕುತಂತ್ರತೆಯನ್ನು ಮುಕ್ತವಾಗಿ ಹೇಳಿದ್ದಾರೆ.

'ಅಕ್ಕ' ಕಾದಂಬರಿಯ ಪ್ರಮುಖ ಪಾತ್ರದಾರಿಗಳು ತಮ್ಮ 'ಕ್ಯಾತ' ಹಾಗೂ ಅಕ್ಕ 'ದೇವಿರಿ'. ಇವರಿಬ್ಬರು ಅಪ್ಪ ಅಮ್ಮನನ್ನು ಕಳೆದುಕೊಂಡು ಕೊಳಗೇರಿ ಪ್ರದೇಶಕ್ಕೆ ಬಂದು ಪುಟ್ಟ ಗುಡಿಸಲಿನಲ್ಲಿ ವಾಸಿಸುತ್ತಾರೆ. ಕ್ಯಾತನು ಚಿಕ್ಕವನಾಗಿದ್ದರಿಂದ ಪ್ರತಿನಿತ್ಯ ಶಾಲೆಗೆ ಹಾಗೂ ಅಕ್ಕ ದೇವಿರಿಯು ಕೆಲಸ ಮಾಡಿ ಮನೆಯ ಖರ್ಚುವೆಚ್ಚಗಳನ್ನು ನೋಡಿಕೊಳ್ಳುತ್ತಾಳೆ. ದೇವೀರಿಯು ಪಾರಂಭದಲ್ಲಿ ಕ್ಯಾತನನ್ನು ಉತ್ತಮವಾಗಿ ಪ್ರೀತಿಯಿಂದ ಮಾತನಾಡಿಸುತ್ತಿದ್ದಳು ಹಾಗೂ ತಿಂಡಿ–ತಿನಿಸುಗಳನ್ನು ತಂದು ಕೊಟ್ಟು ಊಟ ಮಾಡಿಸುತ್ತಿದ್ದಳು. ಬರುಬರುತ್ತಾ ಆಕೆಯು ಆತನಿಗೆ ಬೈಯ್ಯುವುದು, ನಿರ್ಲಕ್ಷ್ಯ ಮಾಡುವುದು ಸಮಯಕ್ಕೆ ಸರಿಯಾಗಿ ಮನೆಗೆ ಬರುತ್ತಿರಲಿಲ್ಲ.

ಇದರಿಂದ ಕ್ಯಾತನಿಗೆ ಅಕ್ಕ ಬದಲಾಗಿದ್ದಾಳೆ. ಎಲ್ಲಿಗೆ ಪ್ರತಿನಿತ್ಯ ಹೋಗಿ ಹೊತ್ತಿಲ್ಲದ ಸಮಯಕ್ಕೆ ಬರುತ್ತಾಳೆ? ರಂಡೆಮುಂಡೆ ಎಂದು ಆತನೊಬ್ಬನೇ ಕೆಟ್ಟಕೆಟ್ಟದಾಗಿ ಬೈಯ್ದುಕೊಳ್ಳುತ್ತಾನೆ. ಒಂದು ಸಲ ಕ್ಯಾತ ಅಕ್ಕನನ್ನು ಪ್ರಶ್ನಿಸಿದಾಗ ಪೆಟ್ಟುಕೊಡುತ್ತಾಳೆ. ಮನೆಗೆ ಕೆಲ ಹುಡುಗರು ಆಗಾಗ ಬಂದು ಹೋಗುವುದು ಮಾಡುತ್ತಿರುತ್ತಾರೆ. ಇವಳನ್ನು ನೋಡಿ ಕೊಳಗೇರಿಯ ಜನ ಏನೇನೋ ಪಿಸುಗುಸು ಮಾತನಾಡಿಕೊಳ್ಳುತ್ತಿದ್ದರು. ಕ್ಯಾತನಿಗೆ ಒಂದು ತಿಳಿಯದು. ಒಬ್ಬಂಟಿಯೆಂದು ಪ್ರತಿನಿತ್ಯ ಮನಸ್ಸಿನಲ್ಲಿ ಕಾಡತೊಡಗಿತು.

ಬಾಯಿಗೆ ಬಂದಂಗೆ ಅಕ್ಕ ಬಜಾರಿಯಂತೆ ಬೈದರು ಕೆಲವೊಮ್ಮೆ ಪ್ರೀತಿ ತೋರುತ್ತಿದ್ದಳು. ಕ್ಯಾತನು ರಾಜಕೀಯ, ಆಡಳಿತ ವರ್ಗದವರು ಹೇಳಿದ ಕೆಲಸವನ್ನು ಮನಸ್ಸಿಲ್ಲದ ಮನಸ್ಸಿನಿಂದ ಮಾಡುತ್ತಿದ್ದನು. ಉದಾಹರಣೆಗೆ: ಹೆಂಡ, ಸಿಗರೇಟ್. ಬೀಡ ತಂದುಕೊಡು ಎಂದು ಪುಂಡುಡುಗರು ಹೇಳುತ್ತಿದ್ದರು.

ಬರುಬರುತ್ತಾ ಅಕ್ಕನ ಉಡುಗೆ–ತೊಡುಗೆಯು ಶೈಲಿಯೂ ಬದಲಾಗುತ್ತಾ ಬಂದಿತು. ಪ್ರತಿನಿತ್ಯ ಬಣ್ಣಬಣ್ಣದ ಸೀರೆ ಉಟ್ಟುಕೊಂಡು ಮುಖಕ್ಕೆ ಸಿನಿಮಾ ನಟಿಯರಂತೆ ಬಣ್ಣ ಮೆತ್ತಿಕೊಂಡು ರಂಗುರಂಗಿನಿಂದ ಕೆಲಸಕ್ಕೆ ಹೋಗುತ್ತಿದ್ದಳು.

ಕ್ಯಾತನಿಗೆ ಒಂದು ಅರ್ಥವಾಗುತ್ತಿರಲಿಲಲ್ಲ. ಮನಸ್ಸಿನಲ್ಲಿ ಅಕ್ಕನನ್ನು ಕುರಿತು ಬೈಯ್ದುಕೊಳ್ಳುತ್ತಿದ್ದ. ಒಂದುದಿನ ತಡೆಯಲಾಗದೆ ಎಲ್ಲಿಗೆ ಹೋಗುತ್ತೀಯಾ? ಎಂದು ಕೇಳಿದಾಗ ಮರು ಮಾತನಾಡದೆ ಆತನನ್ನು ಚೆಂದವಾಗಿ ರೆಡಿಮಾಡಿ ಪೇಟೆಗೆ ಕರೆದುಕೊಂಡು ಬಂದು ಹೋಟೆಲಿನಲ್ಲಿ ಊಟಮಾಡಿಸಿ, ತಿನ್ನಲು ತಿಂಡಿ ಕೊಡಿಸಿ, ಐಸ್‌ಕ್ರೀಮ್ ಕೊಡಿಸಿ ಮನೆಗೆ ನೀ ಹೋಗು ನಾ ಬರುತ್ತೇನೆಂದು ಆಟೋ ಹತ್ತಿ ಹೋದವಳು ತಿರುಗಿ ಪುನಃ ಬರುವುದೇ ಇಲ್ಲ.

ಕ್ಯಾತನು ಅಕ್ಕನಿಗಾಗಿ ಪ್ರತಿನಿತ್ಯವು ಕಾಯುತ್ತಾ, ಅಳುತ್ತಾ ಕುಳಿತಿರುವಾಗ ಆಕೆಯು ಯಾರೋ ಗಂಡಸಿನ ಜೊತೆಪೇಟೆಯಲ್ಲಿ ಮನೆಮಾಡಿಕೊಂಡು ಆರಾಮಾಗಿ ಇದ್ದಾಳೆಂದು ಕೇರಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು.

೧೯೮೨ರ ನವೆಂಬರ್‌ನಲ್ಲಿ ಕರ್ನಾಟಕದ ಶಾಸನ ಸಭೆಗೆ ಚುನಾವಣೆಯ ತಯಾರಿ ನಡೆದಿತ್ತು. ಆಗ ಪಿ.ಲಂಕೇಶ್ ವರದಿಗಾರರಾಗಿ ಲಾಲ್‌ಬಾಗ್ ರಸ್ತೆಯ ಕೊಳಗೇರಿಯೊಂದಕ್ಕೆ ಹೋಗಿದ್ದಾಗ ಅಲ್ಲೊಬ್ಬ ಪುಟ್ಟ ಹುಡುಗ ಗಾಢ'ದುಗುಡದಲ್ಲಿ ಕೂತಿದ್ದ. ಕುತೂಹಲಕ್ಕೆ ವಿಚಾರಿಸಿದಾಗ "ಅಕ್ಕ ನಾಕ್‌ದಿನದಿಂದ ಮನೆಗೆ ಬಂದಿಲ್ಲ ಅವಳನ!" ಅಂದು ಮುಖ ಮುಚ್ಚಿಕೊಂಡು ಅಳತೊಡಗಿದ.

೧೯೮೨ರ ನವೆಂಬರ್ ನಿಂದ ೧೯೮೩ರ ಮಾರ್ಚ್ ಚುನಾವಣೆಯ ಅಬ್ಬರ ಮುಗಿದ ನಂತರ ಅವನ ಕತೆ 'ಪತ್ರಿಕೆ' ಯಲ್ಲಿ ಧಾರವಾಹಿಯಾಗಿ ಪ್ರಕಟವಾಯಿತು. ಅವನ ಭಾಷಾಶೈಲಿಯು ವಿಭಿನ್ನವಾಗಿದ್ದು, ಕೆಲವೊಮ್ಮೆ ಕೆಟ್ಟ ಪದಗಳ ಬಳಕೆಯಾಗಿದೆ. ಆತ ಹೇಳಿದ ರೀತಿಯಲ್ಲಿಯೇ ಕಾದಂಬರಿಯೂ ಬೈಗುಳದಿಂದ ಪ್ರಾರಂಭವಾಗಿ ಬೈಗುಳದಿಂದಲೇ ಮುಕ್ತಾಯವಾಗಿದೆ. ಕೊಳಗೇರಿಯ ಜನಜೀವನದ ಶೈಲಿಯನ್ನು ಮುಕ್ತವಾಗಿ ತಿಳಿಸಿ. ಕ್ಯಾತನು ಕೊನೆಗೂ ಅನಾಥವಾಗುತ್ತಾನೆ. ಅಕ್ಕ ಹಿಂತಿರುಗಿ ಬರುವುದೇ ಇಲ್ಲ. ಲೇಖಕರು ವಾಸ್ತವಿಕವಾಗಿ ಕಥೆಯನ್ನು ಹೆಣೆದಿದ್ದಾರೆ

–ನಂದಿನಿ ಕೆ. ಎಲ್

# ಅಲ್ಲಿ ವರ್ಲ್ಡ್ ಕಪ್ ಇಲ್ಲಿ ಗಂಗೋತ್ರಿ ಕಪ್



ಗಂಗೋತ್ರಿ ವಿದ್ಯಾರ್ಥಿ ಬಳಗ ಹಮ್ಮಿಕೊಡಿದ ಕ್ರಿಕೆಟ್ ಪಂದ್ಯವಳಿಯಲ್ಲಿ ದಾಂಡಿಗ ಚಂಡನ್ನು ದಂಡಿಸಲು ವಿಫಲವಾಗಿರುವುದು.

ಗಂಗೋತ್ರಿಯ ಗ್ರಂಥಾಲಯದ ಮುಂಭಾಗದ ಕ್ರೀಡಾಂಗಣದಲ್ಲಿ ನಡೆದ ಗಂಗೋತ್ರಿ ವಿದ್ಯಾರ್ಥಿಗಳ ಕ್ರಿಕೆಟ್ ಪಂದ್ಯವಳಿಯಲ್ಲಿ ವಿಶ್ವವಿದ್ಯಾನಿಲಯದ

ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದರು.

ಅತ ಆಸ್ಟ್ರೇಲಿಯಾ–ನ್ಯೂಜಿಲ್ಯಾಂಡ್ ನೆಲದಲ್ಲಿ ಭಾರತ ಅಜಯದೊಂದಿಗೆ ಸೆಮಿಫೈನಲ್ ಕಡೆ ಹೆಜ್ಜೆ ಹಾಕುತ್ತಿದ್ದರೆ, ಇತ್ತ ಗಂಗೋತ್ರಿಯಲ್ಲಿ ವಿಭಾಗ–ವಿಭಾಗಗಳ ಮಧ್ಯೆ ತೀವ್ರ ಹಣಾಹಣಿಯಿಂದ ಸ್ಪರ್ಧಿಸುತ್ತಿದ್ದವು. ನಿಗದಿತ ಆರು ಓವರ್‌ಗಳು ಪ್ರತಿ ಇನಿಂಗ್ಸ್‌ನಲ್ಲಿ ಒಳಗೊಂಡಿದ ಪಂದ್ಯಾವಳಿ. ಕೆಲವು ಪಂದ್ಯಗಳು ಮದ್ಯೆ ಬಿರುಸಿನ ಪೈಪೋಟಿಯ ಕ್ರೀಡಾ ಹೋರಾಟದ ಸ್ಪೂರ್ತಿ ಆಕರ್ಷಕವಾಗಿತ್ತು.

ಹಲವು ವಿದ್ಯಾರ್ಥಿಗಳು ತರಗತಿಗೆ ಬಂಕ್ ಹಾಕಿ ಬಿಸಿಲನ ತಾಪ ನಡುವೆ ಪಂದ್ಯವನು ಕುತೂಹಲದಿಂದ ವಿಕ್ಷೀಸುತ್ತಿದ್ದದು ಸಾಮಾನ್ಯವಾಗಿತ್ತು.

ಗಂಗೋತ್ರಿಯ ಸುತ್ತಲಿನ ಮಹಾರಾಜ ಕಾಲೇಜು, ಇತರೆ ಸ್ಥಳಿಯ ಶಿಕ್ಷಣ ಸಂಸ್ಥೆಗಳ ಕೆಲವು ಕಾಲೇಜುಗಳು ಭಾಗವಹಿಸಿದವು. ಪ್ರವೇಶಾತಿ ಶುಲ್ಕ ಪ್ರತಿ ತಂಡಕ್ಕೆ 300 ರೂಪಾಯಿಯಂತೆ ನಿಗದಿ ಪಡಿಸಲಾಯಿತ್ತು.

ಮೊದಲನೆಯ ಬಹುಮಾನ ಮೊತ್ತ ನಾಲ್ಕು ಸಾವಿರ ರೂಪಾಯಿಗಳು, ಎರಡನೆಯ ಬಹುಮಾನದ ಮೊತ್ತ ಮೂರು ಸಾವಿರ ರೂಪಾಯಿಗಳು ಹಾಗೂ ತೃತಿಯ ಸ್ಥಾನ ಪಡೆದವರಿಗೆ ಎರಡು ರೂಪಾಯಿಗಳೆಂದು ನಿಗದಿಪಡಿಸಲಾಗಿತು. ಅಂತಿಮವಾಗಿ ಪ್ರಾಯೋಜಕರ ತಂಡವೆ ಮೊದಲನೆ ಸ್ಥಾನ ಗಳಿಸಿ. ಗಂಗೋತ್ರಿ ಕಪ್ ತನ್ನದಾಗಿಸಿಕೊಂಡಿತ್ತು.

–ನಂಜುಂಡಸ್ವಾಮಿ ಎಮ್

# ಮೈ ವಿವಿಯ ಅಂತರ ವಲಯ ಕ್ರೀಡಾಕೂಟಕ್ಕೆ ಚಾಲನೆ



ಮೈಸೂರು ವಿವಿ ಸಂಯುಕ್ತಾಶ್ರಯದಲ್ಲಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಮೇಯರ್ ಆರ್. ಲಿಂಗಪ್ಪ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

**ಂ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನದ ೪೭ ಕಾಲೇಜು ೧೫೦೦ ಕ್ರೀಡಾಪಟುಗಳು ಭಾಗಿ**

ಸ್ನಾತಕೋತ್ತರ ಮಂಡಳಿ ಮತ್ತು ಮೈಸೂರು ವಿವಿ ಸಂಯುಕ್ತಾಶ್ರಯದಲ್ಲಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೇಯರ್ ಆರ್. ಲಿಂಗಪ್ಪ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮೈಸೂರು ವಿವಿ ಅನೇಕ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ನೀಡಿದೆ. ಈ ನಿಟ್ಟಿನಲ್ಲಿ ಕ್ರೀಡಾಪಟುಗಳು ತಮ್ಮ ಸಾಮರ್ಥ್ಯವನ್ನು ನಿರೂಪಿಸಬೇಕು. ಕ್ರೀಡೆಯಲ್ಲಿ ಭಾಗವಹಿಸಿದವರೆಲ್ಲ ಗೆಲುವು ಸಾಧಿಸಲು ಸಾಧ್ಯವಿಲ್ಲ. ಕ್ರೀಡಾಸ್ಫೂರ್ತಿಯಿಂದ ಪಾಲ್ಗೊಂಡರೆ ಇಂದು ಸೋತರೂ ಮುಂದೆ ಗೆಲುವು ಸಾಧಿಸಬಹುದು ಎಂದು ತಿಳಿಸಿದರು.

ಕ್ರೀಡಾಪಟುಗಳ ಪರವಾಗಿ ಸ್ನಾತಕೋತ್ತರ ಮಂಡಳಿಯ ಕ್ರೀಡಾ ಮಂಡಳಿಯ ಕ್ರೀಡಾಪಟು ದರ್ಶನ್ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಇದೇ ವೇಳೆ ವಿವಿಯ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಸಿ. ಕೃಷ್ಣ ಅವರನ್ನು ಸನ್ಮಾನಿಸಲಾಯಿತು.

ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಷಟಲ್ ಬ್ಯಾಡ್ಮಿಟನ್, ಹಾಕಿ, ಕಬ್ಬಡಿ, ಖೋ–ಖೋ ಟೇಬಲ್ ಟೆನಿಸ್, ಹ್ಯಾಂಡ್‌ಬಾಲ್, ವಾಲಿಬಾಲ್, ಚೆಸ್, ಬಾಲ್ ಬ್ಯಾಡ್ಮಿಟನ್, ಮತ್ತು ಕ್ರಿಕೆಟ್ ಪಂದ್ಯಾವಳಿಗಳು ನಡೆಯಲಿವೆ. ಸ್ನಾತಕೋತ್ತರ ಮಂಡಳಿಯ ಅಧ್ಯಕ್ಷ ಪ್ರೊ. ಬಿ. ಎಸ್. ವಿಶ್ವನಾಥ್, ಕಾರ್ಯದರ್ಶಿ ಡಾ. ಪಿ. ಕೃಷ್ಣಯ್ಯ ಇತರರು ಹಾಜರಿದ್ದರು.

–ನಂದಿನಿ ಕೆ. ಎಲ್

# ಗಂಗೋತ್ರಿ ಮಡಿಲಿಗೆ ಸಮಗ್ರ ಪ್ರಶಸ್ತಿ



ಮೈಸೂರು ವಿವಿಯ ಸಮಗ್ರ ಪ್ರಶಸ್ತಿಯ ವಿಜೇತರೊಂದಿಗೆ ಕುಲಸಚಿವರು ಹಾಗೂ ಗಣ್ಯರು.

ಮೈಸೂರು ವಿವಿ ಅಂತರ ಕಾಲೇಜು, ಅಂತರ ವಲಯ ಪುರುಷರ ಕ್ರೀಡಾಕೂಟದಲ್ಲಿ ಮಾನಸ ಗಂಗೋತ್ರಿ ಸ್ನಾತಕೋತ್ತರ ಮಂಡಳಿ ತಂಡ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದೆ.

ಮೈಸೂರು ವಿವಿಯ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ಕ್ರೀಡಾಕೂಟದ ಎಲ್ಲಾ ವಿಭಾಗಗಳಲ್ಲಿಯೂ ಉತ್ತಮ ಪ್ರದರ್ಶನ ತೋರಿದ ಮೈಸೂರು ವಿವಿ ಸ್ನಾತಕೋತ್ತರ ಕ್ರೀಡಾ ಮಂಡಳಿಯ ಆಟಗಾರರು ೨೫ ಅಂಕ ಪಡೆಯುವ ಮೂಲಕ ಸಮಗ್ರ ಪ್ರಶಸ್ತಿ ಪಡೆದರು. ೧೩ ಅಂಕ ಪಡೆದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ದ್ವಿತೀಯ ಪ್ರಶಸ್ತಿ ಹಾಗೂ ೧೩ ಅಂಕಗಳನ್ನು ಪಡೆದ ಮಂಡ್ಯ ಸರಕಾರಿ ಕಾಲೇಜು ತೃತಿಯ ಬಹುಮಾನ ಪಡೆಯಿತು.

ಮೈಸೂರು ವಿವಿಯ ಕುಲಸಚಿವ ಪ್ರೊ. ಸಿ. ಬಸವರಾಜು ಮಾತನಾಡಿ, ' ದೇಶವು ಆರೋಗ್ಯಕರವಾಗಿರಬೇಕಾದ್ದರೆ, ಪ್ರತಿಯೊಬ್ಬರೂ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ. ಹಾಗಾಗಿ ಕ್ರೀಡೆಯು ಶಿಕ್ಷಣ ಕ್ಷೇತ್ರದ ಅವಿಭಾಜ್ಯ ಅಂಗವಾಗಿ ಬಳಕೆಯಾಗಬೇಕು ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಸ್ನಾತಕೋತ್ತರ ಕ್ರೀಡಾಮಂಡಳಿಯ ಅಧ್ಯಕ್ಷ ಪ್ರೊ. ಬಿ ಎಸ್. ವಿಶ್ವನಾಥ್ ಹಳೆಯ ದಸರಾ ಕ್ರೀಡೆ ಗತವೈಭವಗಳನ್ನು ಮೆಲುಕು ಹಾಕಿದರು.

ಸನ್ಮಾನಿತರಾದ ಮಣಿಯವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಮೈಸೂರು, ಬೆಂಗಳೂರು ನಗರಗಳಲ್ಲಿ ಕಬಡ್ಡಿ ಆಟಗಾರನಾಗಿ ಹಾಗೂ ತರಬೇತುದಾರರಾಗಿ ಪಡೆದ ಅನುಭವಗಳನ್ನು ಹಂಚಿಕೊಂಡರು.

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಸಿ. ಕೃಷ್ಣ, ಉಪನಿರ್ದೇಶಕ ಡಾ. ಪಿ. ಕೃಷ್ಣಯ್ಯ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ ಬಿ ಡಿ ಕಾಂತರಾಜು, ತರಬೇತುದಾರ ಡಾ. ಎನ್. ಬಿ. ಸುರೇಶ್ ಇದ್ದರು.

–ನಿಂಗರಾಜು ಸಿ

ಸಂಪಾದಕರು ಮತ್ತು ಪ್ರಕಾಶಕರು: ಡಾ. ಸಿ.ಕೆ ಪುಟ್ಟಸ್ವಾಮಿ ಅಧ್ಯಕ್ಷರು, ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮೈಸೂರು–6. ಮುದ್ರಕರು: ಶ್ರೀ ಎಸ್. ಆನಂದ್, ನಿರ್ದೇಶಕರು, ವಿ.ವಿ. ಮುದ್ರಣಾಲಯ ಮಾನಸ ಗಂಗೋತ್ರಿ, ಮೈಸೂರು–6. 20–03–2015